**SC No. 264/2023**
**PW-19**

## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ.264/2023

| | | |
|---|---|---|
| ಸಾಕ್ಷಿದಾರರ ಹೆಸರು | ಎನ್ ವಿಶ್ವನಾಥ | ಪ್ರಮಾಣ ವಚನ ಮಾಡಿದ ದಿನಾಂಕ: 04.02.2026 |
| ತಂದೆಯ ಹೆಸರು | ನಾಗೇಶನಾಯಕ್ | |
| ವಯಸ್ಸು | 54 ವರ್ಷ | |
| ವೃತ್ತಿ | ಹೆಚ್ಚುವರಿ ತಹಶೀಲ್ದಾರ ಮೈಸೂರು ತಾಲ್ಲೂಕ | ಚಾ.ಸಾಃ 29 |
| ವಾಸ ಸ್ಥಳ | ಮೈಸೂರು | ಫ್ರಾ.ಸಾಃ 19 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

1. ದಿನಾಂಕ 08.03.2021 ರಿಂದ ಇಲ್ಲಿಯವರೆಗೆ ನಾನು ಮೈಸೂರಿನ ಹೆಚ್ಚುವರಿ ತಹಶೀಲ್ದಾರನ್ನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಮೆಟಗಳ್ಳಿ ಪೊಲೀಸ್ ಠಾಣೆಯ ಪೊಲೀಸ ಇನ್ಸಪೆಕ್ಟರರವರು ಪತ್ರ ಬರೆದು, ಅವರ ಠಾಣೆಯ ಮೊಕದ್ದಮೆ ಸಂ.70/2023 ರ ಕಲಂ 302 ಐ.ಪಿ.ಸಿ ಪ್ರಕರಣದಲ್ಲಿ ಶ್ರೀಮತಿ ಹರ್ಷಿತಾ ಕೋಂ ಮಾದೇವ ಅಲಿಯಾಸ್ ಮಾದೇಶ ಇವರ ಶವ ಪಂಚನಾಮೆಯನ್ನು ಮಾಡಿ ವರದಿ ನೀಡಲು ಕೋರಿದ್ದರು. ನಾನು ದಿನಾಂಕ 16.07.2023 ರಂದು ಬೆಳಿಗ್ಗೆ 10 ಗಂಟೆಗೆ ಮೈಸೂರು ಮೆಡಿಕಲ್ ಕಾಲೇಜಿನ ಶವಗಾರಕ್ಕೆ ಭೇಟಿ ನೀಡಿ ಅಲ್ಲಿ ಹಾಜರಿದ್ದ ಪೊಲೀಸ ಸಿಬ್ಬಂಧಿಗಳಿಗೆ ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ 3 ಜನ ಪಂಚಾಯತಿದಾರರು

ಮತ್ತು ರಕ್ತ ಸಂಬಂಧಿಗಳನ್ನು ಹಾಜರುಪಡಿಸುವಂತೆ ಮೌಖಿಕವಾಗಿ ತಿಳಿಸಿದೆ. ಆ ಪ್ರಕಾರ ಹರೀಶ, ಕುಮಾರ ಮತ್ತು ಶಾರಧಾ ಎಂಬುವ 3 ಜನ ಪಂಚರನ್ನು ಹಾಜರುಪಡಿಸಿದ್ದರು. ರಕ್ತ ಸಂಬಂಧಿ ಮೃತೆಯ ಸೋದರ ಮಾವ ಸಂತೋಷ ಎಂಬುವವರನ್ನು ಹಾಜರುಪಡಿಸಿದ್ದರು. ನಾನು ಅವರನ್ನು ಕರೆದುಕೊಂಡು ಶವಗಾರರ ಒಳಗಡೆ ಹೋಗಿದ್ದೆನು. ಶವವನ್ನು ನೋಡಿ ಮೃತೆ ಹರ್ಷಿತಾ 5 ಅಡಿ ಎತ್ತರ, ಗೋದಿ ಮೈ ಬಣ್ಣ, ಸಾಧಾರಣ ಮೈಕಟ್ಟು, ತಲೆಯಲ್ಲಿ ಸುಮಾರು 12 ಇಂಚು ಕಪ್ಪು ಕೂದಲು ಇದ್ದು, ಬಲಗೆನ್ನೆಯಲ್ಲಿ ಕಪ್ಪು ಕಾರಳ ಇತ್ತು. ಮೃತೆಯ ಕುತ್ತಿಗೆಯಲ್ಲಿ ಚಾಕುವಿನಿಂದ ಕುಯ್ಯದಿರುವ ಬಲಭುಜದ ಮೇಲಿನ ಮಾಂಸ, ಕತ್ತರಿಸಿದ ಗುರುತು ಇತ್ತು.  ಮೃತೆ ಹೊಟ್ಟೆಯಲ್ಲಿ ಚಾಕುವಿನಿಂದ ಚುಚ್ಚಿದ ಗುರುತು ಇತ್ತು. ಬಲಗೈಯಲ್ಲಿ ಚಾಕುವಿನಿಂದ ಕುಯ್ಯದ ಗುರುತು ಇತ್ತು ಹಾಗೂ ಬೆನ್ನಿನ ಮತ್ತು ಬೆನ್ನಿನ ಕೆಳಭಾಗದಲ್ಲಿ 8 ಕಡೆ ಚಾಕುವಿನಿಂದ ಚುಚ್ಚಿದ ಗುರುತು ಇತ್ತು. ಮೃತೆಯ ಮೈ ಮೇಲೆ ನೀಲಿ ಮತ್ತು ಕೆಂಪು ಬಣ್ಣದ ಹೂವು ಡೈಸನ್ ಇರುವ ನೈಟಿ, ಬಿಸ್ಕತ್ ಬಣ್ಣದ ಬ್ರಾ, ಬಿಸ್ಕತ್ ಬಣ್ಣದ ಒಳಲಂಗ್, ಗುಲಾಬಿ ಬಣ್ಣದ ಕಾಚ್ ಇದ್ದವು. ರಕ್ತ ಸಂಬಂದಿಕರಾದ ಸಂತೋಷರವರಿಂದ ಹೇಳಿಕೆಯನ್ನು ಪಡೆದುಕೊಂಡಿದ್ದೆನು ನಾನು ಶವ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಶವ ಪಂಚನಾಮೆ ವರದಿಯನ್ನು ತೋರಿಸಲಾಯಿತು, ಸಾಕ್ಷಿದಾರರು ಶವಪಂಚನಾಮೆಯನ್ನು ವರದಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–32 ಎಂದು ಗುರುತಿಸಲ್ಪಟ್ಟಿದ್ದು,

ಸಾಕ್ಷಿದಾರರ ಸಹಿಗಳನ್ನು ನಿಪಿ–32(ಬಿ) ರಿಂದ ನಿಪಿ–32(ಕೆ) ಎಂದು ಗುರುತಿಸಲಾಯಿತು. ಸದರಿ ಶವಪಂಚನಾಮೆಯನ್ನು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 12.30 ರವರೆಗೆ ಒಟ್ಟು 2 ಗಂಟೆ 30 ನಿಮಿಷದವರೆಗೆ ಮಾಡಿದ್ದೆನು. ನಂತರ ಆರಕ್ಷಕ ನಿರೀಕ್ಷಕರು ಮೆಟಗಳ್ಳಿ ರವರಿಗೆ ದಿನಾಂಕ 17.07.2023 ಪತ್ರ ಬರೆದು ಶವ ಪಂಚನಾಮೆಯನ್ನು ಲಗತ್ತಿಸಿ ಕಳುಹಿಸಿ ಕೊಟ್ಟಿದ್ದೆನು. ಸಾಕ್ಷಿದಾರರು ಮೆಟಗಳ್ಳಿ ಪೊಲೀಸ ಠಾಣೆಯ ಪೊಲೀಸ ಇನ್ಸಪೆಕ್ಟರ್ ರವರಿಂದ ಬಂದಿದ್ದ ಮನವಿ ಪತ್ರವನ್ನು ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–41 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ–41(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

3. ಶವ ಪಂಚನಾಮೆಯನ್ನು ಮಾಡುವ ಪೂರ್ವದಲ್ಲಿ ತನಿಖಾಧಿಕಾರಿಯವರು ನನ್ನನ್ನು ಭೇಟಿಯಾಗಿದ್ದರು ಎಂದರೆ ಸರಿಯಲ್ಲ. ನಾನು ಶವ ಪಂಚನಾಮೆಯನ್ನು ಮಾಡುವ ಪೂರ್ವದಲ್ಲಿಯೇ ಈ ಪ್ರಕರಣದ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಾನು ಹೇಳಿದಂತಹ ಪಂಚರನ್ನು ಪೊಲೀಸರು ಹಾಜರುಪಡಿಸಿದರು ಎಂದರೆ ಸರಿ. ನಾನು ಶವವನ್ನು ನೋಡಿದಾಗ ಆ ಶವ ಉತ್ತರಕ್ಕೆ ತಲೆಯಾಗಿ ದಕ್ಷಿಣಕ್ಕೆ ಕಾಲು ಇದ್ದು ಸ್ಟ್ರಾಕ್ಚರ್ ಮೇಲೆ ಆಗಾಂತವಾಗಿ ಇತ್ತು. ನಾನು ಆ ದಿನ ಶವಗಾರದ ಒಳಗಡೆ ಒಬ್ಬನೇ ಹೋಗಿದ್ದೆ. ಶವಗಾರದ ಒಳಗಡೆ ಶವವನ್ನು ಕಾಯುವ ವಾಚಮ್ಯಾನ್ ಮತ್ತು ಮಹಿಳಾ ಪೊಲೀಸ ಪೇದೆ ಇದ್ದರು. ನಾನು ನನ್ನ ಸ್ಟಿಬ್ಬಂಧಿಯವರಿಗೆ ಉಕ್ತಲೇಖನವನ್ನು ನೀಡಿ ಬರೆಸಿದ್ದೆನು. ನಾನು ಶವಗಾರದ

ಒಳಗಡೆ ಒಬ್ಬನೇ ಹೋಗಿದ್ದು ಹೊರಗಡೆ ಬಂದು ಸಿಬ್ಬಂಧಿಗೆ ಉಕ್ತಲೇಖನವನ್ನು ಕೊಟ್ಟು ಬರೆಸಿದ್ದೆನು. ಶವದ ಮುಂದೆ ನಾನು ಶವ ಪಂಚನಾಮೆಯನ್ನು ಬರೆಸಿರಲಿಲ್ಲ ಎಂದರೆ ಸರಿ, ಅಲ್ಲಿ ಟೇಬಲ್ ಇರಲಿಲ್ಲ ಆದ್ದರಿಂದ ಹೊರಗಡೆ ಬರೆಸಿದ್ದೆನು. ನಾನು ಶವ ಪಂಚನಾಮೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಶವ ಪಂಚನಾಮೆಯನ್ನು ಬೆಳಿಗ್ಗೆ 10 ಗಂಟೆಯಿಂದ 12.30 ವರೆಗೆ ಮಾಡಿದ್ದೆ. ಮೃತ ಸಂಬಂಧಿ ಸಂತೋಷ ರವರ ಹೇಳಿಕೆಯನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಶವ ಪಂಚನಾಮೆಯನ್ನು ಮಾಡದೇ ಇದ್ದರೂ ಸಹ ತನಿಖಾಧಿಕಾರಿಯವರಿಗೆ ಸಹಾಯವಾಗಲಿ ಎನ್ನುವ ಉದ್ದೇಶದಿಂದ ನಿಪಿ–32 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**